# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 251/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀಮತಿ ಪ್ರೀತಿ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಪವನ್ ಕುಮಾರ್ | | 25.07.2024 |
| ವಯಸ್ಸು | ಃ 22 ವರ್ಷ | | |
| ವೃತ್ತಿ | ಃ ಗೃಹಿಣಿ | ಪ್ರಾ.ಸಾ. | ಃ 13 |
| ವಾಸಸ್ಥಳ | ಃ ಗೌಡರಹುಂಡಿ | ಚಾ.ಸಾ. | ಃ 15 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನನ್ನ ತಂದೆಗೆ ನಾನು ಮತ್ತು ನನ್ನ ಅಣ್ಣ ಗುರುಸ್ವಾಮಿ ಇಬ್ಬರು ಮಕ್ಕಳು ಇರುತ್ತೇವೆ. ನಾನು ಮತ್ತು ನನ್ನ ತಾಯಿ ಗೌಡರಹುಂಡಿ ಗ್ರಾಮದಲ್ಲಿ ವಾಸವಿದ್ದೇವೆ. ನನ್ನ ಅಣ್ಣ ನನ್ನ ಅಜ್ಜಿಯ ಊರಾದ ದನಗಹಳ್ಳಿಯಲ್ಲಿ ವಾಸವಿದ್ದಾನೆ. ಈ ಪ್ರಕರಣದ 2ನೇ ಆರೋಪಿ ಮಲ್ಲಿಗಮ್ಮ ನನ್ನ ತಾಯಿಯಿರುತ್ತಾರೆ. ಈ ಪ್ರಕರಣದ 1ನೇ ಆರೋಪಿತ ಶರತ್ ಕುಮಾರ್ ಗೌಡರಹುಂಡಿ ಗ್ರಾಮದವರೇ ಇರುತ್ತಾರೆ ಮತ್ತು ಅವರ ಪರಿಚಯ ಇದೆ. ಊರಲ್ಲಿ ನನ್ನ ತಾಯಿಗೂ ಶರತ್ ಕುಮಾರ್ ಗೂ ಸಂಬಂಧ ಇದೆ ಎಂದು ಮಾತನಾಡಿಕೊಳ್ಳುತಿದ್ದರು. ಶರತ್ ಕುಮಾರ್ ಇವರು ಆಗಾಗ ರಾತ್ರಿ ವೇಳೆಯಲ್ಲಿ ನಮ್ಮ ಮನೆಗೆ ಬರುತ್ತಿದ್ದರು. 2 ½ ವರ್ಷದ ಹಿಂದೆ ನಾನು ಚಾ.ಸಾ-1 ರವರನ್ನು ಮದುವೆಯಾಗಿದ್ದೇನೆ. ಅದಕ್ಕೂ ಮೊದಲು ನಾನು ಮತ್ತು ಚಾ.ಸಾ-1 ಪವನ್ ಕುಮಾರ್ ಇಷ್ಟಪಡುತ್ತಿದ್ದೆವು. ನಾವು ಒಬ್ಬರಿಗೊಬ್ಬರು ಇಷ್ಟ ಪಡುತ್ತಿರುವ ವಿಷಯವನ್ನು ಪವನ್ ಕುಮಾರ್ ಆತನ ತಂದೆ ಶಿವರಾಜಪ್ಪನಿಗೆ ತಿಳಿಸಿದಾಗ ಶಿವರಾಜಪ್ಪ ಇವರು ನನ್ನ ತಾಯಿಯನ್ನು ನಮ್ಮಿಬ್ಬರ ಮದುವೆ ಬಗ್ಗೆ ಕೇಳಿದ್ದರು. ಆ ಕಾಲಕ್ಕೆ ನನ್ನ ತಾಯಿ ನಮ್ಮಿಬ್ಬರ ಮದುವೆಗೆ ಒಪ್ಪಿರಲಿಲ್ಲ. ನಂತರ ಶರತ್ ಕುಮಾರ್ ಇವರ ತಮ್ಮ ಸುದರ್ಶನ್ ಇವರು ದನಗಳ್ಳಿ ಗ್ರಾಮದ ನನ್ನ ಅಜ್ಜಿಯ ಮನೆಗೆ ಹೋಗಿ ಅಲ್ಲಿ ಯಜಮಾನರನ್ನು ಸೇರಿಸಿ ನನ್ನ ಮತ್ತು ಪವನ್

ಕುಮಾರ್ ಮದುವೆ ನಿಶ್ಚಯ ಮಾಡಿದ್ದರು. ಆ ರೀತಿ ಯಜಮಾನರನ್ನು ಸೇರಿಸಿದಾಗ ಪವನ್ ಕುಮಾರ್ ತಂದೆ ಶಿವರಾಜಪ್ಪ ಮತ್ತು ಬಸವಣ್ಣ ಸಹ ಹಾಜರಿದ್ದರು. ಆ ಕಾಲಕ್ಕೆ ದಿಃ*05.06.2021* ರಂದು ಮದುವೆ ಮಾಡಲು ನಿಶ್ಚಯ ಮಾಡಿದ್ದರು. ಆ ಕಾಲಕ್ಕೆ ಕೋರೋನಾ ಕಾಯಿಲೆ ಹರಡಿದ್ದರಿಂದ ಕಾರ್ತಿಕ ಮಾಸದಲ್ಲಿ ಮದುವೆ ಮಾಡೋಣ ಎಂದು ಹೇಳಿದ್ದರು. ಆ ಕಾಲಕ್ಕೆ ನಾನು ಮತ್ತು ಪವನ್ ಕುಮಾರ್ ಓಡಾಡಿಕೊಂಡು ಇದ್ದೆವು.

*2.* ದಿಃ*28.05.2021* ರಂದು ಪವನ್ ಕುಮಾರ್ ನ ತಂದೆ ಕಾಣುತ್ತಿಲ್ಲ ಎಂದು ಯಾರೋ ಬಂದು ಹೇಳಿದಾಗ ಪವನ್ ಕುಮಾರ್ ನಮ್ಮ ಮನೆಯಿಂದ ಅವರ ಮನೆಗೆ ಹೋಗಿದ್ದ. ಆ ನಂತರ ದಿಃ*28.05.2021* ರಂದು ಶಿವರಾಜಪ್ಪ ಗೌರಮ್ಮನ ಮನೆಯಲ್ಲಿದ್ದರು ಮತ್ತು ಸಂಜೆ *4.30* ರ ಸಮಯದಲ್ಲಿ ಶರತ್ ಕುಮಾರ್ ಇವರು ಶಿವರಾಜಪ್ಪನನ್ನು ಕರೆದುಕೊಂಡು ಹೋಗಿದ್ದರು ಎಂದು ಶರತ್ ಕುಮಾರ್ ಹೇಳಿಕೆ ಕೊಟ್ಟಿದ್ದಾರೆ ಎಂದು ಗೊತ್ತಾಗಿತ್ತು. ನಂತರ ಶಿವರಾಜಪ್ಪ ಇವರ ಕೊಲೆಯಾಗಿದೆ ಎಂದು ಗೊತ್ತಾಗಿತ್ತು. ಶರತ್ ಕುಮಾರ್ ಮತ್ತು ನನ್ನ ತಾಯಿಗೆ ನನ್ನ ಮತ್ತು ಪವನ್ ಕುಮಾರ್ ನ ಮದುವೆ ಮಾಡಲು ಇಷ್ಟವಿಲ್ಲದರಿಂದ ಅವರೇ ಶಿವರಾಜಪ್ಪ ಇವರ ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿತ್ತು. ಶಿವರಾಜಪ್ಪ ಇವರನ್ನು ತೋಟಕ್ಕೆ ಕರೆದುಕೊಂಡು ಹೋಗಿ ಆ್ಯಂಗುಲರ್ ನಿಂದ ಕೊಚ್ಚಿ ಕೊಲೆ ಮಾಡಿ ಮದು ಎನ್ನುವ ಹುಡುಗನನ್ನು ಕರೆದುಕೊಂಡು ಹೋಗಿ ಶವವನ್ನು ರಾಮಪುರ ನಾಲೆಗೆ ಎಸೆದಿದ್ದಾರೆ ಎಂದು ಗೊತ್ತಾಗಿತ್ತು. ಈ ಎಲ್ಲಾ ವಿಷಯದ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**<u>ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು</u>**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*